ಶ್ರೀ ಗಂಗಾ ಬೋಳಿ.—ಅಲ್ಲಿ ನೀರಿನ ಸೌಲಭ್ಯವಿಲ್ಲದ 20 ಗ್ರಾಮಗಳಿಗೆ ಬಹಳ ಅನಾನುಕೂಲ ವಾಗಿದೆ. ಅದುದರಿಂದ ಆ 20 ಗ್ರಾಮದ ಜನರಿಗೆ ಏನಾದರೂ ಪ್ರಯತ್ನ ಮಾಡಿ ಅಲ್ಲಿ ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ರಾಚಯ್ಯ.—ಮೊದಲು ಅಲ್ಲಿ ಒಬ್ಬರೂ ಭೂಮಿಯನ್ನು ಕೇಳುತ್ತಿರಲಿಲ್ಲ. ಅಲ್ಲಿ ನಾವು ಬೈಂಚುಗಳನ್ನು ಹೊಡಿಸಿದಮೇಲೆ ಅದು ಫಲವತ್ತಾದ ಭೂಮಿ ಎಂದು ಕೇಳಲು ಜನರೀಗ ಪ್ರಾರಂಭ ಮಾಡಿದ್ದಾರೆ. ಈಗ ಅದನ್ನು ಬಿಟ್ಟುಕೊಟ್ಟರೆ ನಮಗೆ ಬಹಳ ಲುಕ್ಸಾನಾಗುತ್ತದೆ, ಸಾಧ್ಯವಿಲ್ಲ.

ಶ್ರೀ ಗಂಗಾಬೋಳಿ.—ಅಲ್ಲಿ 10 ಸಾವಿರ ಎಕರೆ ಭೂಮಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳೋಣವಾಯಿತು. ಅದು ಎಲ್ಲೆಲ್ಲಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ಪ್ರಶ್ನೆ ಕಳುಹಿಸಿದರೆ ಉತ್ತರವನ್ನು ಒದಗಿಸಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಆ ಭೂಮಿಯಲ್ಲಿ ಏನಾದರೂ ಅಗ್ರಿಕಲ್ಚರಲ್ ಕಾಲೋನಿಗಳಿಗೆ ಅಂದರೆ ಸೋಷಿಯಲ್‌ವೆಲ್‌ಫೇರ್ ಇಲಾಖೆಯ ಮೂಲಕ ಭೂಮಿಯನ್ನು ಬಿಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಎಲ್ಲೆಲ್ಲಿ ಸ್ಪೆಷಲ್ ಸ್ಕೀಮುಗಳು ಸಬ್‌ಸಿಡೈಜ್ ಆಗಿ ಅಗ್ರಿಕಲ್ಚರಲ್ ರೀಹ್ಯಾಬಿಲಿಟೇಷನ್ನಿಂಗ್ ಕಾರ್ಪೊರೇಷನ್ನಿಂದ ನಡೆಯುತ್ತಿವೆ ಅಂಥವುಗಳಿಗೆ ಭೂಮಿ ಕೊಡುವುದನ್ನು ಪರಿಶೀಲನೆ ಮಾಡುತ್ತಿದ್ದೇವೆ.

Divisional Land Development Banks.

243. Sri DIGAMBARA RAO B. KALMANKAR (Aland).—

Will the Minister for Development and Co-operation be Pleased to state: —

(*a*) whether the Divisional Land Development Banks are started in the State for speedy disposal and sanction of loans for agricultural developments;

(*b*) whether the Divisional Land Development Banks are empowered only to scrutinise the loan applications and forward them to Central Land Development Banks, Bangalore to sanction or whether they themselves can sanction and issue cheques;

(*c*) whether it is a fact that there is lot of corruption in Land Development Banks in the State while advancing instalments to the loanees and also delay caused in sanctioning loans;

(*d*) if so, the steps they propose to take to overcome these malpractices ?

A.— Sri P. M. NADGOUDA (Minister for Development and co-operation).—

(*a*) No, But branch offices of the Mysore Central Co-operative Land Development Bank are opened at the headquarters of the Revenue Divisions.

(SRI P. M. NADGOUDA)

(*b*) The branch offices are empowered to scrutinise and sanction loans up to Rs. 5,000 and below and also to arrange for the release of funds; They are empowered to scrutinise and forward the loan applications for above Rs. 5,000 for sanction and release of funds by the Central Bank (Head Office).

(*c*) No.

(*d*) Does not arise.

Sri DIGAMBARA RAO B. KALMANKAR.—Why powers for sanction ing loans exceeding Rs. 5,000 were not delegated to Branch offices ?

† **Sri P. M. NADGOUDA.**—It involves financial commitment. The branch offices are empowered to scrutinise and forward the loan applications for above Rs. 5,000 for sanction by the Central Bank (Head Office).

ಶ್ರೀ ಎಂ. ನಾಗಪ್ಪ.—(ಸಿ) ಗೆ ಉತ್ತರವಾಗಿ ಭ್ರಷ್ಟಾಚಾರ ನಡೆಯುತ್ತಿಲ್ಲ ಎಂದು ಹೇಳ ರಾಗಿದೆ. ಹೀಗೆ ಉತ್ತರವನ್ನು ಕೊಡುತ್ತಿರುವುದರಿಂದ ನೀವು ಆ ಭ್ರಷ್ಟಾಚಾರಕ್ಕೆ ಉತ್ತೇಜನ ಕೊಟ್ಟಹಾಗೆ ಆಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಅಂಥ ವಿಚಾರಗಳು ಸರ್ಕಾರದ ನಜರಿಗೆ ಬಂದಿಲ್ಲ. ಮಾನ್ಯ ಸದಸ್ಯರು ತಂದರೆ ಆ ಬಗ್ಗೆ ಉಗ್ರ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ನಾಲ್ಕು ಜೋನುಗಳು ಬೆಂಗಳೂರಿನಲ್ಲೇ ಇವೆಯೋ ಅಥವಾ ಬೇರೆ ಬೇರೆ ಕಡೆಗಳಲ್ಲಿ ಇವೆಯೋ ?

ಶ್ರೀ ಪಿ. ಎಂ. ನಾಡಗೌಡ.—ಎಲ್ಲೆಲ್ಲಿ ಸ್ಪೆಷಲ್ ಯೋಜನೆಗಳನ್ನು ಕೈಗೊಳ್ಳಲಾಗಿದೆಯೋ ಅಲ್ಲಿಯೂ ಅವನ್ನು ಮಾಡಲಾಗಿದೆ.

ಶ್ರೀ ಸಿದ್ಧಯ್ಯಕಾಶೀಮಠ.—ಹಣವನ್ನು ನೇರವಾಗಿ ಹೆಡ್ಡಾಫೀಸು ಇರುವ ಕಡೆಯಲ್ಲೆ ಆ ಹಣಕ್ಕೆ ಚೆಕ್ಕನ್ನು ಕೊಡುವಂತೆ ಏರ್ಪಾಡು ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಬ್ಯಾಂಕ್ ಆಫೀಸುಗಳಲ್ಲೂ 5 ಸಾವಿರದೊಳಗಿರತಕ್ಕ ರೊಕ್ಕ ವನ್ನು ಅಲ್ಲೇ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಮೊದಲು 5 ಸಾವಿರ ರೂಪಾಯಿಗಳವರೆಗೆ ಸಾಲವನ್ನು ಕೊಡುತ್ತಿದ್ದರು. ಈಗ ಅದನ್ನು ಡಿವಿಜನಲ್ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕಿಗೆ ಅಧಿಕಾರವನ್ನು ಕೊಟ್ಟಿರುವುದರಿಂದ ಗುಲ್ಬರ್ಗ ಮತ್ತು ರಾಯಚೂರಿನಲ್ಲಿರತಕ್ಕ ಜನಗಳು ಬೆಂಗಳೂರಿಗೆ ಕೇಂದ್ರದ ಬ್ಯಾಂಕಿಗೆ ಬರಬೇಕಾಗುತ್ತದೆ. ಆದ್ದರಿಂದ ಅವರಿಗೆ ಹೆಚ್ಚು ತೊಂದರೆಯಾಗುತ್ತದೆ. ಅವರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಈ ದೃಷ್ಟಿಯಿಂದ ಇದರ ಬಗ್ಗೆ ಬೇರೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅವರು ಡಿವಿಜನಲ್ ಆಫೀಸಿನಲ್ಲಿಯೇ ಆ ಹಣವನ್ನು ತೆಗೆದು ಕೊಳ್ಳಬಹುದು, ಕೇಂದ್ರದ ಬ್ಯಾಂಕಿಗೆ ಬರುವ ಅವಶ್ಯಕತೆ ಇಲ್ಲ.

Sri DIGAMBARA RAO B. KALMANKAR.—Whether it has come to the notice of the Government that a class of *miraz dars* has come up who take Rs. 100 to 200 in individual cases and that is how they have been harassing the needy persons ?

Sri P. M. NADGOUDA.—Sir, Government are not aware of such things. If such things are brought to the notice of the Government, we will take severe action.

Sri DIGAMBARA RAO B. KALMANKAR.—In respect of persons who are incharge of these branch offices, May I know, what are their qualifications, what are their pay scales and what are their duties, Sir ?

Sri P. M. NADGOUDA.—Sir, if the Hon'ble Member puts a separate question, I am prepared to answer.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಸ್ವಾಮಿ, ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ರೈತರು ಸಾಲಕ್ಕೆ ಅರ್ಜಿಯನ್ನು ಹಾಕಿಕೊಳ್ಳಬೇಕಾದರೆ ನುಮಾರು 50-60 ರೂಪಾಯಿಗಳವರೆಗೂ ಖರ್ಚು ಮಾಡಬೇಕಾಗುತ್ತದೆ. ಒಂದು ವೇಳೆ ಅವರಿಗೆ ಸಾಲ ಸಿಕ್ಕುವುದಾದರೆ ಅವರು ಅಷ್ಟು ಹಣವನ್ನು ಖರ್ಚು ಮಾಡಿದರೂ ಪರವಾಯಿಲ್ಲ. ಸಾಲ ಸಿಕ್ಕದೇ ಇರುವವರೂ ಪೂರ್ವ ಭಾವಿಯಾಗಿ ಅಷ್ಟು ಹಣವನ್ನು ಖರ್ಚು ಮಾಡತಕ್ಕ ಒಂದು ವ್ಯವಸ್ಥೆ ಏನಿದೆ ಅದನ್ನು ತಪ್ಪಿಸುವುದನ್ನು ಸರ್ಕಾರದವರು ವಿಚಾರ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ವಿಚಾರಮಾಡುತ್ತೇವೆ.

Sri B. P. GANGADHAR.—Has it come to the notice of the Government that these loan applications have not been disposed of, even though some years have rolled on and a number of petitions have reached the Government and may I know what action Government has taken in the matter ?

Sri P. M. NADGOUDA.—Sir, I want to bring to the notice of the Hon'ble House that the applications pending, at the present moment, with the Land Development Bank is about 190 and with all the primary Land Development Banks about 327. These applications have been submitted to these Banks and within one month they are being processed.

ಶ್ರೀ ಎ. ಮುನಿಯಪ್ಪ.—ಸ್ವಾಮಿ, (ಸಿ) ಗೆ ಉತ್ತರವಾಗಿ ನಿರ್ದಿಷ್ಟವಾಗಿ ಇಂಥವರು ತಪ್ಪಿತ ಸ್ಥರು ಎಂದು ಹೇಳಿದರೆ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಹಾಗಾದರೆ ಹಿಂದೆ ಇಂಥಾ ಕೇಸುಗಳು ಯಾವುದಾದರೂ ಬಂದಿವೆಯೇ ? ಒಂದು ವೇಳೆ ಅಂಥಾ ಕೇಸುಗಳು ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅಂಥಾ ಕೇಸುಗಳು ಎಷ್ಟು ಬಂದಿವೆ ?

ಶ್ರೀ ಪಿ. ಎಂ. ನಾಡಗೌಡ.—ನಿರ್ದಿಷ್ಟವಾಗಿ ಯಾವುದೂ ಕೇಸು ಬಂದಿಲ್ಲ. ಜನರಲ್ ಆಗಿ ಬಂದಿವೆ.

ಶ್ರೀ ಬಿ. ದೊಡ್ಡಬೋರೇಗೌಡ.—(ಸಿ) ಗೆ ಉತ್ತರವಾಗಿ ಭ್ರಷ್ಟಾಚಾರ ಯಾವುದೂ ಇಲ್ಲ ಎಂದು ಹೇಳಿದ್ದೀರಿ, ಕೆಲವು ಸಾಲದ ಅರ್ಜಿಗಳು ತಾಲ್ಲೂಕುಗಳಿಂದ ಸೆಂಟ್ರಲ್ ಬ್ಯಾಂಕಿಗೆ ಮಂಜೂರಾತಿಗೆ ಬಂದು 5—6 ವರ್ಷಗಳಾಗಿವೆ. ಮತ್ತು ಅಂಥಾ ಅರ್ಜಿಗಳು ಮಂಜೂರಾಗದೇ ನುಮಾರು ಸಾವಿರಾರು ಉಳಿದಿವೆ. ಇಂಥಾ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ ಅವಧಿಯನ್ನೇನಾದರೂ ನಿಗದಿ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಮೂರು ತಿಂಗಳಲ್ಲಿ ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಸಾಲದ ಸಲುವಾಗಿ ಯಾರು ಅಫಿಡೆವಿಟ್ ಕೊಡುತ್ತಾರೆಯೋ ಅಂಥಾ ರೈತರಿಗೆ 20 ಪರ್ಸೆಂಟ್ ಸಾಲದ ಹಣವನ್ನು ಆಗಿಂದಾಗಲೇ ಕೊಡಬೇಕೆಂದು ನಿಗದಿ ಮಾಡಿದ್ದೇವೆ.

ಶ್ರೀ ಕೆ. ಸಂಗನ ಗೌಡ.—ಟ್ರ್ಯಾಕ್ಟರನ್ನು ಖರೀದಿ ಮಾಡುವ ಸಲುವಾಗಿ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ಕೊಡುವ ವಿಚಾರ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈಗ ರೈತರು ಅಫಿಡವಿಟ್ ಕೊಟ್ಟ ಮೇಲೆ 20 ಪರ್ಸೆಂಟ್ ಸಾಲವನ್ನು ಕೂಡಲೇ ಕೊಡುತ್ತೇವೆಂದು ಹೇಳಿದಿರಿ, ತಾವು ಆ ರೀತಿ ಸಾಲವನ್ನು ಕೊಡುವಾಗ ಖಾತೇದಾರರಿಗೆ ಮಾತ್ರ ಕೊಡುತ್ತೀರಾ ಅಥವಾ ಖಾತೆದಾರರ ಹೆಸರಿನಲ್ಲಿ ಬೇರೊಬ್ಬರು ಜಮೀನನ್ನು ಆಬಾದು ಮಾಡುತ್ತಿದ್ದರೆ ಅವರೂ ಸಹ ಸಾಲಕ್ಕೆ ಅರ್ಜಿ ಹಾಕಿದ್ದರೆ ಅವರಿಗೆ ಸಾಲವನ್ನು ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆಯನ್ನು ಸ್ವಲ್ಪ ವಿಚಾರ ಮಾಡಿ ಹೇಳಬೇಕಾಗುತ್ತದೆ.

Sri DIGAMBARA RAO B. KALMANKAR.—In view of the fact that serious allegations are made by the Hon'ble Members of this House that such type of corruption do exist in the primary bank, may I know whether the Government is seriously thinking of providing some new device so that corruption may be nipped in the very bud itself ?

Sri P. M. NADGOUDA.—No Sir. The Government is not aware of it and they are not thinking of any such new device.

ಶ್ರಿ ಎಂ. ನಾಗಪ್ಪ.—ಮೊದಲು ಪ್ರೈಮರಿ ಬ್ಯಾಂಕ್‌ಗಳಿಗೆ 5 ಸಾವಿರದವರೆಗೆ ಸಾಲವನ್ನು ಕೊಡತಕ್ಕಂಥ ಅಧಿಕಾರವಿತ್ತು. ಈಗ ಡಿವಿಜನಲ್ ಆಫೀಸರ್‌ನ್ನು ಸಾಲ ಮಂಜೂರು ಮಾಡುವ ಬಗ್ಗೆ ನೇಮಕ ಮಾಡಿ ಅವರಿಗೂ ಸಹ 5 ಸಾವಿರ ರೂಪಾಯಿಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕೊಟ್ಟಿದ್ದೀರಿ. ಇದರಿಂದ ಹೆಚ್ಚು ಸಾಲವನ್ನು ತೆಗೆದುಕೊಳ್ಳುವವರಿಗೆ ತೊಂದರೆ ಯಾಗುವುದರಿಂದ ಇವರಿಗೇ ಹೆಚ್ಚಿನ ಸಾಲವನ್ನು ಅಂದರೆ 15 ಸಾವಿರದವರೆಗೆ ಮಂಜೂರು ಮಾಡುವ ಅಧಿಕಾರವನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿರುವಂತೆ ಕಾಣುತ್ತದೆ. ಪ್ರೈಮರಿ ಬ್ಯಾಂಕ್‌ಗಳಿಗೂ ಮತ್ತು ಡಿವಿಜನಲ್ ಆಫೀಸರ್ ಅವರಿಗೂ 5 ಸಾವಿರದವರೆಗೆ ಸಾಲವನ್ನು ಮಂಜೂರು ಮಾಡುವ ಅಧಿಕಾರವಿದೆ.

ಶ್ರೀ ಎಂ. ನಾಗಪ್ಪ.—ನಾನು ಕೇಳಿದ್ದು, ಡಿವಿಜನಲ್ ಆಫೀಸರ್ ಅವರಿಗೆ ಹೆಚ್ಚಿನ ಸಾಲ ವನ್ನು ಮಂಜೂರು ಮಾಡುವ ಅಧಿಕಾರವನ್ನು ಕೊಡುತ್ತೀರಾ ಎಂದು ?

ಶ್ರೀ ಪಿ. ಎಂ. ನಾಡಗೌಡ.—ನಮ್ಮ ರಾಜ್ಯದಲ್ಲಿ ಪ್ರೈಮರಿ ಬ್ಯಾಂಕ್‌ಗಳು ಎಷ್ಟಿವೆಯೋ, ಅವೆಲ್ಲಕ್ಕೂ ಸಾಲವನ್ನು ಮಂಜೂರು ಮಾಡುವ ಅಧಿಕಾರವನ್ನು ಕೊಟ್ಟಿಲ್ಲ. 21 ಸೊಸೈಟಿಗಳಿಗೆ ಮಾತ್ರ ಸಾಲವನ್ನು ಮಂಜೂರು ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಪ್ರೈಮರಿ ಬ್ಯಾಂಕ್‌ಗಳಲ್ಲಿ ಸಾಲವನ್ನು ಮಂಜೂರು ಮಾಡುವಾಗ ಕಾಲ ವಿಳಂಬವಾಗುತ್ತಿಲ್ಲ ಮತ್ತು ಭ್ರಷ್ಟಾಚಾರ ನಡೆಯುತ್ತಿಲ್ಲವೆಂದು ಹೇಳಿದಿರಿ. ನನಗೆ ತಿಳಿದಮಟ್ಟಿಗೆ ಇವೆರಡೂ ಸಹ ಇವೆ. ಅಲ್ಲದೆ ಹಿಂದುಳಿದ ವರ್ಗದವರಿಗೆ ರಕ್ಷಣೆ ಇಲ್ಲವಾಗಿದೆ. ಬ್ಯಾಂಕಿನ ಡೈರೆಕ್ಟರ್ ಅವರು ತಮಗೆ ಬೇಕಾದವರಿಗೆ ಸಾಲವನ್ನು ಕೊಡಿಸುತ್ತಿದ್ದಾರೆ. ಆದ್ದರಿಂದ ಇನ್ನು ಮುಂದೆ ನಿಮ್ಮ ವರ್ಗ ಮತ್ತು ನಿಮ್ಮ ಪಂಗಡದವರಿಗೆ ಪ್ರಾತಿನಿಧ್ಯ ಕೊಡುವ ಸಲುವಾಗಿ ನಾಮಕರಣ ಪದ್ಧತಿಯನ್ನು ಜಾರಿಗೆ ತರುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ರೀತಿಯ ಪ್ರಶ್ನೆ ಬಂದಾಗಲೆಲ್ಲ ಈ ಮಾನ್ಯ ಸದಸ್ಯರು ಇದೇ ರೀತಿಯ ಪ್ರಶ್ನೆಯನ್ನು ಕೇಳುತ್ತಿರುತ್ತಾರೆ. ನಿಮ್ಮ ವರ್ಗ ಅಥವಾ ನಿಮ್ಮ ಪಂಗಡದವರಿಂದ ಬಂದಂಥ ಎಲ್ಲಾ ಅರ್ಜಿಗಳನ್ನು ಮಂಜೂರು ಮಾಡಿಸುವಾರು 7 ಕೋಟಿ ರೂಪಾಯಿಗಳವರೆಗೆ ಸಾಲವನ್ನು ಕೊಟ್ಟಿದ್ದೇವೆ. ಈ ಪಂಗಡಕ್ಕೆ ಸೇರಿದವರ ಅರ್ಜಿಗಳನ್ನು ಮಾನ್ಯ ಸದಸ್ಯರು ಎಷ್ಟು ತಂದರೂ ಸಹ ಮಂಜೂರು ಮಾಡುತ್ತೇವೆ. ಬ್ಯಾಂಕ್‌ನ ಕಾನ್‌ಸ್ಟಿಟ್ಯೂಷನ್ ಪ್ರಕಾರ ಚೆ ನಾವಣೆ ಇದೆ. ಆದ್ದರಿಂದ ಚುನಾವಣೆಯಲ್ಲಿ ಆರಿಸಿ ಬರಬೇಕಾಗುತ್ತದೆ. ಬ್ಯಾಂಕನ್ನು ಡಿ-ಆಫಿಷಿಯಲೈಸ್ ಮಾಡಿದ ಮೇಲೆ ನಾಮಿನೇಟ್ ಮಾಡುವುದಕ್ಕೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Sri H. C. LINGA REDDY.—In view of the fact that divisional banks are opened with a view to decentralise power and provide facilities to the raiyats, may I know when the district branches will be opned ?

Sri P. M. NADGOUDA.—It all depends upon the work that is being provided by the Bank.